ಪ್ರಸ್ತುತಿ: ಸುಧಾ ಬ್ರ್ಯಾಂಡ್ ಸ್ಟಾಟ್

# ಕಲರ್ಸ್ ಕನ್ನಡ ವಾಹಿನಿಯಲ್ಲಿ ಹೊಸ ಧಾರಾವಾಹಿ ನಿನಗಾಗಿ



## ಕಿರುತೆರೆಗೆ ನಟಿ ದಿವ್ಯಾ ಉರುಡುಗ ಪುನರಾಗಮನ



**ಕಿರುತೆರೆ** ಕಿರುತೆರೆ ಲೋಕದ ಅಚ್ಚುಮೆಚ್ಚಿನ 'ಕಲರ್ಸ್ ಕನ್ನಡ ವಾಹಿನಿ ' ವಿಭಿನ್ನ ಬಗೆಯ ಸೀರಿಯಲ್‌ಗಳ ಮೂಲಕ ಪ್ರೇಕ್ಷಕರನ್ನು ರಂಜಿಸುತ್ತಲಿದೆ. ಇದೀಗ ಮನಮಿಡಿಯುವ ವಿನೂತನ ಕಥೆಯುಳ್ಳ 'ನಿನಗಾಗಿ' ಧಾರಾವಾಹಿ ಮೂಲಕ ಪ್ರೇಕ್ಷಕರ ಮುಂದೆ ಬರುತ್ತಲಿದೆ.

ವಿಭಿನ್ನ ವ್ಯಕ್ತಿತ್ವದ ಇಬ್ಬರು ವ್ಯಕ್ತಿಗಳು ಒಟ್ಟಿಗೆ ಸಾಗುವ 'ನಿನಗಾಗಿ' ಧಾರಾವಾಹಿಗೆ ಕಿರುತೆರೆ ನಟಿ ದಿವ್ಯಾ ಉರುಡುಗ ನಾಯಕಿಯಾದರೆ, ಗಟ್ಟಿಮೇಳ ಧಾರಾವಾಹಿ ಶಿವರಾಮ್ ಪಾತ್ರದ ನಟ ಋತ್ವಿಕ್ ಮಠದ್ ನಾಯಕರಾಗಿದ್ದಾರೆ. ಜನಪ್ರಿಯ ರಿಯಾಲಿಟಿ ಶೋ 'ಬಿಗ್‌ಬಾಸ್' ಸೀಸನ್ 8 ಮತ್ತು 9ರಲ್ಲಿ ಪ್ರಬಲ ಕಂಟೆಸ್ಟೆಂಟ್ ಆಗಿ ಮಿಂಚಿದ್ದ ದಿವ್ಯಾ ಉರುಡುಗ, 2007ರಲ್ಲೇ ಬೆಳ್ಳಿತೆರೆಯನ್ನು ಪ್ರವೇಶಿಸಿದ್ದರು. ಈಗ ಪುನಃ 'ನಿನಗಾಗಿ' ಧಾರಾವಾಹಿ ಮೂಲಕ ಕಿರುತೆರೆಗೆ ಕಮ್‌ಬ್ಯಾಕ್ ಮಾಡಿರುವುದು ವಿಶೇಷ.

ಈ ಸೀರಿಯಲ್‌ನಲ್ಲಿ ದಿವ್ಯಾ ಯಾವುದೇ ಕಲ್ಮಶವಿಲ್ಲದ ಮುಗ್ಧ ಹುಡುಗಿ 'ರಚ್ಚು ಅಥವಾ ರಚನಾ' ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಅವರು ಈ ಧಾರಾವಾಹಿಯ ಸೂಪರ್‌ಸ್ಟಾರ್ ಕೂಡ ಹೌದು. ಕಾರಣ, ಪ್ರತಿ ಎಪಿಸೋಡ್‌ನ ಕಥೆಯು ಈಕೆಯನ್ನು ಆವರಿಸಿಕೊಂಡಿದೆ.

ಪ್ರೇಕ್ಷಕರ ಅಭಿಮಾನ, ಪ್ರೀತಿ ಹೊಂದಿರುವ ರಚ್ಚುಗೆ ಸರಳ ಜೀವನ ಎಂದರೆ ಇಷ್ಟ. ಅಮ್ಮ ಎಂದರೆ ಅಚ್ಚುಮೆಚ್ಚು, ಅಮ್ಮನ ಮಾತೇ ವೇದವಾಕ್ಯ, ಅಮ್ಮ ಎಂದರೆ ಪ್ರಾಣ. ಅಮ್ಮ ಪ್ರತ್ಯಕ್ಷ ದೇವರು ಎಂದು ಭಾವಿಸುವ ಈ ಹುಡುಗಿಯನ್ನು ಎಲ್ಲರೂ ಪ್ರೀತಿಸುತ್ತಾರೆ. ಆದರೆ, ಅಮ್ಮನ ಪ್ರೀತಿ ಮಾತ್ರ ಕಾಣದಾಗಿದೆ. ಈ ಹುಚ್ಚುಡುಗಿಯ ವೈಯಕ್ತಿಕ ಜೀವನದ ಆಸೆ, ಆಕಾಂಕ್ಷೆಗಳನ್ನು ಯಾರಾದರೂ ಕೇಳುತ್ತಿದ್ದಾರಾ... ಅವೆಲ್ಲವೂ ನೆರವೇರುತ್ತಿವೆಯಾ... ಇಲ್ಲವಾ ಎಂಬ ಅನನ್ಯ ಕಥೆ ಇದಾಗಿದೆ.

ಸೆಲಿಬ್ರಿಟಿ ಆದರೂ ಸಿಂಪಲ್ ಲೈಫ್ ಲೀಡ್ ಮಾಡುವ ಕನಸು ಕಾಣುವ ರಚನಾ ಜೀವನ ಹೇಗಿರಬೇಕು ಎಂದುಕೊಂಡಿದ್ದಾರೋ, ಆ ರೀತಿ ನಡೆಯುತ್ತಿದೆಯಾ... ಅದಕ್ಕೋಸ್ಕರ ಅವಳ ಲೈಫ್ ತ್ಯಾಗ ಮಾಡುತ್ತಿದ್ದಾಳಾ... ಇಂತಹ ಹಲವಾರು ಮನಕಲಕುವ ಪರಿಸ್ಥಿತಿಗಳು ಈ ಧಾರಾವಾಹಿಯಲ್ಲಿ ಮೂಡಿಬರಲಿವೆ.

'ನಿನಗಾಗಿ' ಧಾರಾವಾಹಿ ಪ್ರಾಜೆಕ್ಟ್ ಉತ್ತಮವಾಗಿ ಮೂಡಿಬರಲು ಉತ್ತಮ ನಿರ್ದೇಶಕರು, ಒಳ್ಳೆಯ ಸಹನಟ, ನಟಿಯರು ಶ್ರಮವಹಿಸಿ ದುಡಿಯುತ್ತಿದ್ದಾರೆ. 'ಇದಕ್ಕಿಂತ ಹೆಚ್ಚು ಏನು ಬೇಕು? ಕಿರುತೆರೆಗೆ ಮತ್ತೆ ಕಂಬ್ಯಾಕ್ ಮಾಡಿದರೆ ಇಂತಹ ನಿರ್ಮಾಣ ತಂಡದೊಂದಿಗೆ ಬರಬೇಕು ಅನ್ನಿಸಿತ್ತು. ಅದು ಈ ಧಾರಾವಾಹಿಯಿಂದ ಪೂರ್ತಿಯಾಗಿದೆ. ಇದರ ಎಪಿಸೋಡ್‌ಗಳನ್ನು ನೋಡಿದರೆ ಇದನ್ನು ಯಾರೂ ಸೀರಿಯಲ್ ಅನ್ನೋಕೆ ಸಾಧ್ಯವಿಲ್ಲ. ಅಷ್ಟು ಚೆನ್ನಾಗಿ ಮೂಡಿಬಂದಿದೆ. ಇದಕ್ಕಾಗಿ ಹಗಲು – ರಾತ್ರಿ ಕಷ್ಟಪಟ್ಟು ಕೆಲಸ ಮಾಡಿದ್ದೇವೆ' ಎಂದಿದ್ದಾರೆ ನಟಿ ದಿವ್ಯಾ ಉರುಡುಗ.

### ಮೇ 27ರಿಂದ ಪ್ರಸಾರ

'ನಿನಗಾಗಿ' ಧಾರಾವಾಹಿ ಕಲರ್ಸ್ ಕನ್ನಡ ವಾಹಿನಿಯಲ್ಲಿ ಇದೇ ತಿಂಗಳ 27ನೇ ತಾರೀಖು – ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 8 ಗಂಟೆಗೆ ಪ್ರಸಾರವಾಗಲಿದೆ.

ಜೈ ಮಾತಾ ಕಂಬೈನ್ಸ್ ನಿರ್ಮಾಣದಲ್ಲಿ ಮೂಡಿಬರುತ್ತಿರುವ ಧಾರಾವಾಹಿಗೆ ಸಂಪೃಥ್ವಿ ಅವರ ನಿರ್ದೇಶನವಿದ್ದು, ನಟಿ ದಿವ್ಯಾ ಉರುಡುಗ ಅವರ ಜತೆ ಶಿವರಾಮ್ ಪಾತ್ರದ ಖ್ಯಾತಿಯ ನಟ ಋತ್ವಿಕ್ ಮಠದ್ ನಾಯಕನಾಗಿ ನಟಿಸಲಿದ್ದಾರೆ. ಇತರ ಪ್ರಮುಖ ಪಾತ್ರಗಳಲ್ಲಿ ಪ್ರಿಯಾಂಕ ಕಾಮತ್, ಕಿಶನ್ ಬೆಳಗಲಿ, ವಿಜಯ್ ಕೌಂಡಿನ್ಯ, ಸೋನಿಯಾ ಪೊನ್ನಮ್ಮ ದೇವಯ್ಯ, ಸಿರಿ ಸಿಂಚನ ಅಭಿನಯಿಸಲಿದ್ದಾರೆ.